ದಿನಾಂಕಃ **25-05-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.

ಪಾಟೀ ಸವಾಲು **3** ನೇ ಆರೋಪಿ ಪರ ಶ್ರೀ ಬಿ ಎಂ ಎಲ್ ಜಿ ವಕೀಲರಿಂದ

ನನಗೆ ಸಂಬಂಧಿಸಿದ ಆಧಾರ್ ಕಾರ್ಡ್, ಬಿ.ಪಿ.ಎಲ್ ರೇಷನ್ ಕಾರ್ಡ ಇರುತ್ತದೆ. ಅನವಟ್ಟಿಯಿಂದ ಶಿವಮೊಗ್ಗಕ್ಕೆ ಸುಮಾರು 100 ಕಿ.ಮೀ ದೂರ ಇರುತ್ತದೆ. ಚಾಸಾ-1 ಮತ್ತು ನಾನು ಒಂದೇ ಶಾಲೆಯಲ್ಲಿ ಓದಿರುವುದಿಲ್ಲ, ಆದರೆ ಕ್ರೀಡಾಪಟುಗಳು ಇರುತ್ತೇವೆ. ನಾನು ಮತ್ತು ಚಾಸಾ-1 ರವರು ಕ್ರೀಡಾಪಟುಗಳು ಎನ್ನುವ ಬಗ್ಗೆ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ ಎಂದರೆ ಸರಿ. ನಾವು ಕ್ರೀಡಾಪಟು ಇರುವ ಬಗ್ಗೆ ನನ್ನ ಬಳಿ ಪ್ರಶಸ್ತಿ ಪತ್ರಗಳು ಇರುತ್ತವೆ. ಸದರಿ ದಾಖಲೆಗಳನ್ನು ನಾವು ಪೊಲೀಸರಿಗೆ ಕೊಟ್ಟಿರುವುದಿಲ್ಲ. ಕೂಸುಕಲ್ಲಿನಲ್ಲಿರುವ 8 ¼ ಎಕರೆ ಜಮೀನನ್ನು ಚಾಸಾ-1 ರವರು ಎಷ್ಟು ಮೊತ್ತಕ್ಕೆ ಮತ್ತು ಯಾವಾಗ ಖರೀದಿಸಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆರೋಪಿತರು ನನಗೆ ಭರತ್(ಚಾಸಾ-1) ರವರು ಹೇಳುವ ಪೂರ್ವದಲ್ಲಿ ಅವರು ಯಾರು ಎಂಬ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ನನಗೆ ರೈಸ್ ಪುಲ್ ವ್ಯವಹಾರ ಏನು ಮತ್ತು ಎಂತಹದ್ದು ಎಂಬ ಬಗ್ಗೆ ನನಗೆ ಗೊತ್ತಿರಲಿಲ್ಲ, ಸಾಕ್ಷಿಯು ಮುಂದುವರಿದು ಆ ವಸ್ತುವಿನ ಬಗ್ಗೆ ಕೇಳಿದ್ದೆ , ಆದರೆ ಯಾವ ರೀತಿ ಇರುತ್ತದೆ ಎಂದು ಗೊತ್ತಿರಲಿಲ್ಲ ಎಂದು ಉತ್ತರಿಸಿರುತ್ತಾರೆ. ಸದರಿ ರೈಸ್ ಪುಲ್ ವಸ್ತುವಿನ ಬಗ್ಗೆ ನನಗೆ ಯಾರು ಹೇಳಿದ್ದರು ಎನ್ನುವ ಬಗ್ಗೆ ನನಗೆ ನೆನಪಿರುವುದಿಲ್ಲ.

2. ಚಾಸಾ-1 ರವರು ಮೊದಲು ದೂರು ಕೊಡುವ ಕಾಲಕ್ಕೆ ನನ್ನನ್ನು ಸಹ ಆರೋಪಿಯೆಂದು ಹೇಳಿದ್ದರು ಎಂದರೆ ಸರಿ, ಸಾಕ್ಷಿಯು ಮುಂದುವರಿದು ನಂತರ ಪೊಲೀಸರು ತನಿಖೆ ಮಾಡಿ ಸತ್ಯ ವಿಚಾರವನ್ನು ನಾನು ತಿಳಿಸಿದ ಮೇರೆಗೆ ನನ್ನನ್ನು ಕೈಬಿಟ್ಟಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಚಾಸಾ-1 ರವರನ್ನು ನಾನು ನನ್ನ ವಿರುದ್ದ ಏಕೆ ದೂರು ಕೊಟ್ಟಿರುತ್ತೀರಿ ಎಂದು ವಿಚಾರಿಸಿರುತ್ತೇನೆ. ಸದರಿ ವಿಚಾರವನ್ನು ಯಾವ ದಿನ, ತಿಂಗಳು ಮತ್ತು ವರ್ಷ ಹೇಳಿರುತ್ತೇನೆ ಎಂದು ನನಗೆ ಹೇಳಲು ಆಗುವುದಿಲ್ಲ, ಆದರೆ ದೂರನ್ನು ಕೊಟ್ಟ ನಂತರ ಕೇಳಿರುತ್ತೇನೆ. ನಾನು ಆರು ಲಕ್ಷ ಹಣವನ್ನು ಮನೆ ಕಟ್ಟುವ ಸಲುವಾಗಿ ಇಟ್ಟುಕೊಂಡಿದ್ದು, ಹಾಗೂ ನನ್ನ ಅಣ್ಣ ಮತ್ತು ಚಿಕ್ಕಪ್ಪರ ಬಳಿ ಕೈ ಸಾಲ ಮಾಡಿಕೊಂಡಿದ್ದೆ. ನಾನು ಮನೆಯಲ್ಲಿ ನಾಲ್ಕುವರೆ ಲಕ್ಷ ಹಣವನ್ನು ಸ್ವಲ್ಪ ವರ್ಷದವರೆಗೆ ಇಟ್ಟುಕೊಂಡಿದ್ದು, ಅದರಲ್ಲಿ ಸ್ವಲ್ಪ ಹಣವನ್ನು ಕೈಸಾಲ ಮಾಡಿಕೊಂಡಿದ್ದೇನು. ನನ್ನ ಅಣ್ಣನಿಂದ ಒಂದು ವರೆ ಲಕ್ಷ ಹಣ ಮತ್ತು ಚಿಕ್ಕಪ್ಪನಿಂದ ಸುಮಾರು ಒಂದು ಲಕ್ಷ ಹಣ ಸಾಲ ಪಡೆದುಕೊಂಡಿರುತ್ತೇನೆ. ಸದರಿ ಹಣವನ್ನು ನಾನು ಕೈ ಸಾಲದ ಮುಖಾಂತರ ಪಡೆದುಕೊಂಡಿರುತ್ತೇನೆ. ನನ್ನ ಚಿಕ್ಕಪ್ಪನ ಬಳಿ ಪಡೆದುಕೊಂಡ ಒಂದು ಲಕ್ಷ ಹಣವನ್ನು ನಾಲ್ಕುವರೆ ಲಕ್ಷ ಹಣದಲ್ಲಿಯೇ ಸೇರಿಕೊಂಡಿರುತ್ತದೆ.

3. ಚಾಸಾ-1 ರವರು ಪ್ರಥಮ ಬಾರಿಗೆ ನನ್ನ, ರಾಜೇಶ್, ನಂದನ್ ಮತ್ತು ಮಹಮ್ಮದ್ ರಫೀ ಹಾಗೂ ವಿಜಯಕುಮಾರ್ ಇವರ ವಿರುದ್ದ ದೂರು ಕೊಟ್ಟಿದ್ದು ಬೇರೆಯವರ ಹೆಸರನ್ನು ಹೇಳಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಆ ಬಗ್ಗೆ ನಾನು ವಿಚಾರಿಸಿಲ್ಲ ಎಂದು ಉತ್ತರಿಸಿರುತ್ತಾರೆ. ನಾನು ಪೈಟಿಂಗ್ ಕೆಲಸ ಹಾಗೂ ಕ್ರಿಡಾಪಟುಗಳಿಗೆ ಕೋಚಿಂಗ್ ಕೆಲಸವನ್ನು ಮಾಡುತ್ತಿದ್ದೆ. ನಾನು

ಪೊಲೀಸರ ಮುಂದೆ ಹೇಳಿಕೆ ಕೊಡುವ ಕಾಲಕ್ಕೆ ನಾನು ಪೈಟಿಂಗ್ ಕೆಲಸ ಹಾಗೂ ಕೋಚಿಂಗ್ ಕೆಲಸ ಮಾಡುವ ಬಗ್ಗೆ ಹೇಳಿಲ್ಲ ಎಂದರೆ ಸರಿ. ರೈಸ್ ಪುಲ್ ವ್ಯವಹಾರದ ಬಗ್ಗೆ ಚಾಸಾ-1 ರವರು ಹೇಳಿದ್ದನ್ನು ಹೊರತುಪಡಿಸಿ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ವೈಯಕ್ತಿಕ ಮಾಹಿತಿ ಇರುವುದಿಲ್ಲ ಆದರೆ ಬೇರೆಯವರು ಹೇಳಿದ್ದನ್ನು ಕೇಳಿಸಿಕೊಂಡಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ಸದರೆ ರೈಸ್ ಪುಲ್ ವ್ಯವಹಾರದ ಬಗ್ಗೆ ನಾನು ಯಾವಾಗ ಬೇರೆಯವರ ಮುಖಾಂತರ ತಿಳಿದುಕೊಂಡಿರುತ್ತೇನೆ ಎಂಬ ಬಗ್ಗೆ ಹೇಳಲು ಆಗುವುದಿಲ್ಲ.

4. ಅಕ್ಟೋಬರ್ 2016 ರಂದು ನಾನು 6 ಲಕ್ಷ ಹಣವನ್ನು ಕೊಟ್ಟಿರುತ್ತೇನೆ. ಆದರೆ ದಿನಾಂಕ ಗೊತ್ತಿರುವುದಿಲ್ಲ. ಸದರಿ 6 ಲಕ್ಷ ಹಣವನ್ನು ನೋಟಿನ ಮುಖ ಬೆಲೆ ಯಾವುದು ಇತ್ತು ಎಂದು ನನಗೆ ನೆನಪಿರುವುದಿಲ್ಲ. ನಾನು 6 ಲಕ್ಷ ಹಣವನ್ನು ಚಾಸಾ-1 ರವರಿಗೆ ಕೊಟ್ಟಿರುವ ವಿಚಾರವನ್ನು ನನ್ನನ್ನು ಬಿಟ್ಟು ಬೇರೆಯಾರು ನೋಡಿರುವುದಿಲ್ಲ. ಚಾಸಾ-1 ರವರಿಗೆ ಸಾಕ್ಷಿ ಬೇಕಾಗಿದ್ದು ನನ್ನನ್ನು ಆರೋಪಿ ಸ್ಥಾನದಿಂದ ತೆಗೆದು ನನ್ನನ್ನು ಸಾಕ್ಷಿಯನ್ನಾಗಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾವು ನಾಲ್ಕು ಜನ ಸೇರಿಕೊಂಡು ತಲಾ ತಲಾ ಹತ್ತತ್ತು ಲಕ್ಷ ಹಣ ವಿನಿಯೋಗಿಸಬೇಕು ಎಂದು ಮಾತನಾಡಿಕೊಂಡಿದ್ದೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ನಾನು ಚಾಸಾ-1, ನಂದನ್ ಮತ್ತು ವಿಜಯಕುಮಾರ್ ಇವರು ಐಟಿಸಿ ಇಂಟರ್ ನ್ಯಾಷನಲ್ ಹೊಟೇಲ್ ಗೆ ಹೋಗಿ ಮಹಮ್ಮದ್ ರಫೀ ಇವರನ್ನು ಭೇಟಿಯಾಗಿದ್ದೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ರೈಸ್ ಪುಲ್ ವಸ್ತುವನ್ನು ಪರೀಕ್ಷೆ ಮಾಡಲು ಸುಮಾರು 45 ಲಕ್ಷ ಹಣ ಖರ್ಚಾಗುತ್ತದೆ ಹೊರದೇಶದಲ್ಲಿ ಕಾರು, ಬಂಗಲೆ ಕೊಡಿಸುವುದಾಗಿ ಹೇಳಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ನನಗೆ ದೊಡ್ಡ ಸ್ವಾಮೀಜಿ ರಾಜೇಶ್ ಎನ್ನುವವರು ಗೊತ್ತಿರಲಿಲ್ಲ ಎಂದರೆ ಸರಿ. ನಂತರ ಲಲಿತ್ ಅಶೋಕ್ ಹೊಟೇಲ್ ಗೆ ಹೋಗಿ ನಾನು ಮತ್ತು ಚಾಸಾ-1 ರವರು 30 ಲಕ್ಷ ಹಣವನ್ನು ಮಹಮ್ಮದ್ ರಫೀ ಇವರಿಗೆ ಕೊಟ್ಟಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಹಣ ಕೊಡುವ ಕಾಲಕ್ಕೆ ಸಣ್ಣ ಸ್ವಾಮೀಜಿ ಯಾರು ಎಂದು ನನಗೆ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತರ ಪೈಕಿ ಸಣ್ಣ ಸ್ವಾಮೀಜಿ ಯಾರು ಇರುವುದಿಲ್ಲ ಎಂದರೆ ಸರಿ. ಸಣ್ಣ ಸ್ವಾಮೀಜಿಯ ಬಳಿ ಎಷ್ಟು ಮೊತ್ತದ ಬಾಂಡ್ ಪೇಪರ್ ಗೆ ಸಹಿ ಮಾಡಿರುತ್ತೇವೆ ಎಂದು ಹೇಳಲು ಆಗುತ್ತದೆಯೇ ಎಂದರೆ ಸಾಕ್ಷಿಯು ನಮಗೆ ನೋಡಲು ಬಿಟ್ಟಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ವಿಜಯಕುಮಾರ್ ಇವರು ಚಾಸಾ-1 ರವರಿಗೆ 1 ಕೋಟಿ 10 ಲಕ್ಷ ಹಣವನ್ನು ಯಾವ ದಿನಾಂಕದಂದು ಕಟ್ಟಬೇಕು ಎಂದು ಹೇಳಿದ್ದರು ಎಂಬ ಬಗ್ಗೆ ನನಗೆ ದಿನಾಂಕ ಹೇಳಲು ಆಗವುದಿಲ್ಲ, ಆದರೆ ಅಕ್ಟೋಬರ್ 2016 ನೇ ಇಸವಿ ಇರುತ್ತದೆ. 51 ಲಕ್ಷ ಹಣವನ್ನು ಜೋಡಿಸಿಕೊಂಡು ಹೋದ ಕಾಲಕ್ಕೆ ನನ್ನ ಪರವಾಗಿ ಐವತ್ತು ಸಾವಿರ ಹಣ ಕೊಟ್ಟಿರುತ್ತೇನೆ. ಚಾಸಾ-1 ರವರು ಐವತ್ತು ಸಾವಿರ ಹಣವನ್ನು ನನ್ನ ಅಣ್ಣನ ಕಡೆಯಿಂದ ಪಡೆದುಕೊಂಡಿರುತ್ತಾರೆ. ನನ್ನ ಅಣ್ಣನ ಹೆಸರು ರಿಯಾಜ್ ಇರುತ್ತಾರೆ. ನನ್ನ ಅಣ್ಣ ದೈಹಿಕ ಶಿಕ್ಷಕರು ಇರುತ್ತಾರೆ. ನನ್ನ ಅಣ್ಣ ಸದರಿ ಹಣವನ್ನು ಚಾಸಾ-1 ರವರಿಗೆ ನಗದಾಗಿ ಕೊಟ್ಟಿರುತ್ತಾರೆ. ನಾವು ಐವತ್ತೊಂದು ಲಕ್ಷ ಹಣವನ್ನು

ಮಹಮ್ಮದ್ ರಫೀ ಇವರಿಗೆ ಕೊಟ್ಟಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ಈ ಕೇಸ್ ಆಗುವವರೆಗೂ ದೊಡ್ಡ ಸ್ವಾಮೀಜಿ ಯಾರು ಎಂದು ನನಗೆ ಗೊತ್ತಿರಲಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಅವರನ್ನು ನೋಡಿದ್ದೆ, ಆದರೆ ಅವರೇ ಎಂದು ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಸದರಿ ಸ್ವಾಮೀಜಿಯನ್ನು ರಾಮ್ಕೋ ಸಿಮೆಂಟ್ ಲಿಮಿಟೆಡ್ ಬಳಿ ನೋಡಿರುತ್ತೇನೆ. ನಾನು ಪೊಲೀಸರಿಗೆ ಹೇಳಿಕೆ ಕೊಡುವ ಕಾಲಕ್ಕೆ ನಾನು ದೊಡ್ಡ ಸ್ವಾಮೀಜಿಯನ್ನು ನೋಡಿದ್ದೆ ಎಂದು ಹೇಳಿರುವುದಿಲ್ಲ ಎಂದರೆ ಸರಿ. ಸಣ್ಣ ಸ್ವಾಮೀಜಿಯವರು ರೈತರು ಹತ್ತುಕೋಟಿ ಕೇಳುತ್ತಿದ್ದಾರೆ ಎಂದು ಯಾವ ದಿನಾಂಕ ಎಂದು ನೆನಪಿರುವುದಿಲ್ಲ. ಆದರೆ ಅಕ್ಟೋಬರ್ 2016 ಇರುತ್ತದೆ ಎಂದು ಉತ್ತರಿಸಿರುತ್ತಾರೆ. ಸದರಿ ಹತ್ತು ಕೋಟಿ ಹಣ ಕೇಳಿದಾಗ ನಾನು ಮತ್ತು ಚಾಸಾ-1 ರವರು ಬೇರೆ ಬೇರೆ ಇದ್ದೇವು ಎಂದರೆ ಸರಿಯಲ್ಲ. ನಾನು, ಚಾಸಾ-1 ಮತ್ತು ಅವರ ತಂದೆ ಇಪ್ಪತ್ತು ಲಕ್ಷ ಹಣವನ್ನು ತೆಗೆದುಕೊಂಡು ಗ್ರಾಂಡ್ ಅಶೋಕ್ ಹೊಟೇಲ್ ಗೆ ಹೋಗಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಹಣ ಕೊಟ್ಟ ವಿಚಾರವನ್ನು ದೊಡ್ಡ ಸ್ವಾಮೀಜಿಗೆ ತಿಳಿಸಿದ್ದು, ಎರಡು ಮೂರು ದಿನಗಳ ನಂತರ ವಸ್ತುವನ್ನು ಪರೀಕ್ಷೆ ಮಾಡಲು ಬಂದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪಾರ್ಚುನರ್ ಕಾರನ್ನು ನ.ರಾ.ಪುರ ಪೊಲೀಸ್ ಠಾಣಾ ಆವರಣದಲ್ಲಿ ನೋಡಿ ಗುರುತಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಚಾಸಾ-1 ರವರು ನನ್ನ ಆತ್ಮೀಯ ಸ್ನೇಹಿತರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿ ಪರ **1,2,** ಮತ್ತು **4** ರ ಪರ ವಕೀಲರು ಆರೋಪಿ **3** ರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

ಪಾಟೀ ಸವಾಲು ಃ ಆರೋಪಿ **3** ರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಆರೋಪಿ **5** ರವರು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

<u>ಮರು ವಿಚಾರಣೆ ಃ ಇಲ್ಲ ಃಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ
sd/-xx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ